ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 16-03-1992.

# *ಹೋಲಿ ಆಚರಿಸುವುದು ಅರ್ಥಾತ್ ದೃಢ ಸಂಕಲ್ಪದ ಅಗ್ನಿಯಲ್ಲಿ ಬಲಹೀನತೆಗಳನ್ನು ಸುಡುವುದು ಮತ್ತು ಮಿಲನದ ಆಚರಣೆ ಆಚರಿಸುವುದು*

(होली मनाना अर्थात् दृढ़ संकल्प की अग्नि में कमज़ोरियों को जलाना और मिलन की मौज मनाना।)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಅವ್ಯಕ್ತ ಬಾಪ್‌ದಾದಾ ಪವಿತ್ರ ಹಂಸಗಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಆತ್ಮಿಕ ಹೂದೋಟದ ಮಾಲಿಕ ಬಾಪ್ ದಾದಾ ಡಬಲ್ ಹೂದೋಟಗಳನ್ನು ನೋಡುತ್ತಿದ್ದಾರೆ. (ಇಂದು ಸ್ಟೇಜ್ ಮೇಲೆ ಬಹಳ ಸುಂದರ ತೋಟವನ್ನು ಶೃಂಗರಿಸಲಾಗಿತ್ತು) ಒಂದು ಕಡೆ ಪ್ರಕೃತಿಯ ಸುಂದರತೆ ಮತ್ತು ಇನ್ನೊಂದು ಕಡೆ ಆತ್ಮಿಕ ಗುಲಾಬಿಯ ತೋಟದ ಶೋಭೆ. ಡ್ರಾಮಾದಲ್ಲಿ ಆದಿ ಕಾಲ ಸತ್ಯಯುಗದಲ್ಲಿ ಪ್ರಕೃತಿಯ ಸತೋಪ್ರಧಾನತೆಯ ಸುಂದರತೆ ನೀವು ಮಾಸ್ಟರ್ ಆದಿ ದೇವ್ ಆದಿ ದೇವಿಯರಿಗೆ ಮಾತ್ರ ಪ್ರಾಪ್ತಿಯಾಗುವುದು ಈ ಸಮಯದ ಅಂತಿಮ ಸಮಯದಲ್ಲೂ ಪ್ರಕೃತಿಯ ಸುಂದರತೆಯನ್ನು ನೋಡುತ್ತಿದೀರಿ. ಆದರೆ ಆದಿ ಕಾಲ ಮತ್ತು ಅಂತಿಮ ಕಾಲದಲ್ಲಿ ಎಷ್ಟೊಂದು ಅಂತರವಿದೆ! ನಿಮ್ಮ ಸತ್ಯಯುಗಿ ರಾಜ್ಯದಲ್ಲಿ ಪ್ರಕೃತಿಯ ಸ್ವರೂಪ ಎಷ್ಟು ಸತೋಪ್ರಧಾನ ಶ್ರೇಷ್ಠ ಸುಂದರವಾಗಿತ್ತು. ಅಲ್ಲಿಯ ತೋಟ ಮತ್ತು ಇಲ್ಲಿ ನಿಮ್ಮ ತೋಟದಲ್ಲಿ ಎಷ್ಟೊಂದು ಅಂತರವಿದೆ. ಆ ನಿಜವಾದ ಸುವಾಸನೆಯನ್ನು ಅನುಭವ ಮಾಡಿದ್ದೀರಲ್ಲವೇ? ಆದರೂ ನೀವು ಪ್ರಕೃತಿಪತಿ ಶ್ರೇಷ್ಠ ಆತ್ಮರಾಗಿದೀರಿ. ಪ್ರಕೃತಿ ಪತಿಯಾಗಿದ್ದೀರಿ. ಈ ಪ್ರಕೃತಿಯ ಆಟವನ್ನು ನೋಡಿ ಹರ್ಷಿತರಾಗುತ್ತೀರಿ. ಪ್ರಕೃತಿಯ ಏರುಪೇರಾಗಲಿ ಅಥವಾ ಪ್ರಕೃತಿಯು ಸುಂದರ ಆಟವನ್ನು ತೋರಿಸಲಿ ಎರಡರಲ್ಲೂ ಪ್ರಕೃತಿ ಪತಿ ಆತ್ಮರು ಸಾಕ್ಷಿಯಾಗಿ ಆಟವನ್ನು ನೋಡುತ್ತೀರಿ. ಆಟವನ್ನು ಆನಂದಿಸುತ್ತೀರಿ, ಗಾಬರಿಯಾಗುವುದಿಲ್ಲ ಇದಕ್ಕಾಗಿ ಬಾಪ್‌ದಾದಾರವರು ತಪಸ್ಸಿನಿಂದ ಸಾಕ್ಷಿತನದ ಸ್ಥಿತಿಯ ಆಸನದ ಮೇಲೆ ಅಚಲ ಅಡೋಲ್ ಸ್ಥಿತಿಯಲ್ಲಿರುವಂತಹ ವಿಶೇಷ ಅಭ್ಯಾಸವನ್ನು ಮಾಡಿಸುತ್ತಿದ್ದಾರೆ. ಈ ಸ್ಥಿತಿಯ ಆಸನ ಎಲ್ಲರಿಗೂ

ಇಷ್ಟವಾಗುತ್ತದೆಯೇ ಅಥವಾ ವಿರುಪೇರಿನ ಸ್ಥಿತಿ ಇಷ್ಟವಾಗುತ್ತದೆಯೇ? ಅಚಲ ಆಸನ ಎಲ್ಲರಿಗೂ ಇಷ್ಟವಾಗುತ್ತದೆಯಲ್ಲವೇ. ಯಾವುದೇ ಮಾತಾಗಿರಲಿ ಪ್ರಕೃತಿಯ ಮಾತು. ವ್ಯಕ್ತಿಯ ಮಾತು. ಎರಡೂ ಅಚಲ ಸ್ಥಿತಿಯ ಆಸನವನ್ನು ಸ್ವಲ್ಪವೂ ಅಲುಗಾಡಿಸಲು ಸಾಧ್ಯವಿಲ್ಲ. ಇಷ್ಟು ಪಕ್ಕಾ ಆಗಿದ್ದೀರಿ ಅಲ್ಲವೇ ಅಥವಾ ಆಗಬೇಕಾ?

ಪ್ರಕೃತಿಯಲ್ಲೂ ಐದು ಖಿಲಾಡಿಗಳಿದ್ದಾರೆ(ಆಟಗಾರರು) ಮತ್ತು ಮಾಯೆಯಲ್ಲೂ ಐದು ಖಿಲಾಡಿಗಳಿದ್ದಾರೆ (ಆಟಗಾರರು). ಈ ಹತ್ತು ಆಟಗಾರರನ್ನು ತಿಳಿದುಕೊಂಡಿದ್ದೀರಲ್ಲವೇ? ಆಟಗಾರರು ಆಟವಿಲ್ಲದೆ ಇರುವವರೇ? ಯಾವಾಗಾದರೂ ಯಾರೇ ಆಟಗಾರರು ಮುಂದೆ ಬಂದಾಗ. ಯಾರಾದರೂ ಮುಂದೆ ಬಂದೇ ಬರುತ್ತಾರೆ. ಇತ್ತೀಚೆಗೂ ಸಹ ಹಳೆ ಜಗತ್ತಿನಲ್ಲಿ ಆಟವನ್ನು ನೋಡುವಂತಹ ರುಚಿ ತುಂಬಾ ಇದೆಯಲ್ಲವೇ? ಎಷ್ಟು ಪ್ರೀತಿಯಿಂದ ಆಟವನ್ನು ನೋಡುತ್ತಾರೆ. ಅವರು ಹಳೆ ಜಗತ್ತಿನವರು ಮತ್ತು ನೀವು ಸಂಗಮಯುಗೀ ಬ್ರಾಹ್ಮಣ ಆತ್ಮರಾಗಿದ್ದೀರಿ ಅಂದಮೇಲೆ ಆಟವನ್ನು ನೋಡುವುದೆಂದರೆ ಆನಂದಿಸುವುದೇ ಅಥವಾ ಗಾಬರಿಯಾಗುತ್ತೀರಾ? ಕೆಲವರು ಬಿಳುತ್ತಾರೆ ಆದರೆ ಆಟವನ್ನು ನೋಡುವವರು ಬಿಳುತ್ತಿರುವುದನ್ನು ನೋಡಿ ಆನಂದಿಸುತ್ತಾರೆ ಮತ್ತು ವಿಜಯ ಪ್ರಾಪ್ತಿ ಮಾಡುತ್ತಿರುವುದನ್ನು ನೋಡಿ ಆನಂದಿಸುತ್ತಾರೆ. ಅಂದಾಗ ಇದು ಸಹ ಬಹಳ ದೊಡ್ಡ ಆಟವಾಯಿತಲ್ಲವೇ. ಕೇವಲ ಸಹಜತೆಯನ್ನು ಬಿಡಬೇಡಿ ಅಷ್ಟೇ. ಯಾರು ಎಷ್ಟೇ ಅಲುಗಾಡಿಸಲಿ ಆದರೆ ನೀವು ಶಕ್ತಿಶಾಲಿ ಆತ್ಮರು ಅಲುಗಾಡಲು ಸಾಧ್ಯವಿಲ್ಲ. ಇಂದು ಬಾಪ್‌ದಾದಾರವರು ಪ್ರತಿಯೊಂದು ಆತ್ಮೀಕ ಹೂವನ್ನು ನೋಡುತ್ತಿದ್ದರು. ತೋಟಕ್ಕೆ ಕರೆದಾಗ ತೋಟದಲ್ಲಿನ ಎಲೆಗಳನ್ನು ನೋಡುತ್ತೀರಾ ಅಥವಾ ಹೂಗಳನ್ನು ನೋಡುತ್ತೀರಾ? ಇದು ಸಹ ಚೆನ್ನಾಗಿ ಶೃಂಗರಿಸಲಾಗಿದೆ. ಪರಿಶ್ರಮ ಪಡುವವರ ಅದ್ಭುತ ಚೆನ್ನಾಗಿದೆ. ಆದರೆ ಬಾಪ್‌ದಾದಾರವರು ಆತ್ಮಿಕ ಹೂಗಳನ್ನು ನೋಡುತ್ತಿದ್ದರು. ಭಿನ್ನವಾಗಿಯಂತೂ ಇವೆಯಲ್ಲವೆ. ಕೆಲವರು ತುಂಬಾ ಸುಂದರ ರೂಪ-ಬಣ್ಣದವಾರಾಗಿದ್ದಾರೆ. ಬಣ್ಣವೂ ಇದೆ ಮತ್ತು ರೂಪವೂ ಇದೆ. ಇನ್ನು ಕೆಲವರು ಬಣ್ಣ, ರೂಪ ಮತ್ತು ಸುವಾಸನೆಯುಳ್ಳವರಾಗಿದ್ದಾರೆ. ಕೆಲವರು ಕೇವಲ ಬಣ್ಣವುಳ್ಳವರಾಗಿದ್ದಾರೆ. ಬಣ್ಣ ಮತ್ತು ರೂಪವಂತು ಎಲ್ಲಾ ಮಕ್ಕಳಲ್ಲಿ ಬಂದಿದೆ ಏಕೆಂದರೆ ತಂದೆಯ ಸಂಗದ ರಂಗು ಎಲ್ಲರಿಗೂ ಹತ್ತಿಬಿಟ್ಟಿದೆ. ಕೆಲವರು ವ್ಯವಹಾರದ ಮಾತಿನಲ್ಲಿ, ಪುರುಷಾರ್ಥದ ಮಾತಿನಲ್ಲಿ ಸಂಪೂರ್ಣ ಸಂತುಷ್ಟರಿಲ್ಲವೆಂದರೂ ತಂದೆಯ ಸಂಗದ ಬಣ್ಣ ಎಲ್ಲರಿಗೆ ತುಂಬಾ ಪ್ರಿಯವೆನಿಸುತ್ತದೆ. ಅದಕ್ಕಾಗಿಯೇ ಬಣ್ಣ ಎಲ್ಲರಲ್ಲೂ ಬಂದಿದೆ ಮತ್ತು ರೂಪವು ಪರಿವರ್ತನೆಯಾಗುತ್ತಿದೆ. ಏಕೆಂದರೆ ಬ್ರಾಹ್ಮಣ ಆತ್ಮರಾಗಿ ಬಿಟ್ಟಿದ್ದೀರಿ. ಎಷ್ಟೇ ಪುರುಷಾರ್ಥಿ ಆತ್ಮನಾಗಿರಲಿ ಆದರೆ ಬ್ರಾಹ್ಮಣ ಆತ್ಮರಾಗುವುದರಿಂದ ರೂಪವು ಅವಶ್ಯವಾಗಿ ಪರಿವರ್ತನೆಯಾಗುವುದು, ಬ್ರಾಹ್ಮಣ ಆತ್ಮರ ಹೊಳಪು ಬಂದಂತೆ ಪ್ರತಿಯೊಬ್ಬ ಬ್ರಾಹ್ಮಣ ಆತ್ಮರಲ್ಲಿ ಬಂದು ಬಿಡುತ್ತದೆ ಈ ಕಾರಣ ಬಣ್ಣ ಮತ್ತು ರೂಪ ಎಲ್ಲರಲ್ಲಿ ಕಂಡು ಬರುತ್ತದೆ. ಸುವಾಸನೆ ನಂಬರ್‌ವಾರ್ ಆಗಿದೆ ಸುವಾಸನೆಯಾಗಿದೆ ಸಂಪೂರ್ಣ ಪವಿತ್ರತೆ. ಯಾರೇ ಬ್ರಾಹ್ಮಣರಾದರೂ, ಅವರು ಬ್ರಹ್ಮಾಕುಮಾರ ಮತ್ತು ಬ್ರಹ್ಮಾಕುಮಾರಿಯರಾಗುತ್ತಾರೆ. ಕುಮಾರ ಮತ್ತು ಕುಮಾರಿ ಎಂದರೆ ಪವಿತ್ರರಾಗುವುದು. ತನುವಿನಿಂದ ಬ್ರಹ್ಮಚಾರಿಯಾಗುವುದು ಪವಿತ್ರತೆಯ ಪರಿಭಾಷೆ ಬಹಳ ಸೂಕ್ತವಾಗಿದೆ. ಕೇವಲ ಬ್ರಹ್ಮಚರ್ಯವಲ್ಲ. ಇದಕ್ಕೆ ಸಂಪೂರ್ಣ ಪವಿತ್ರತೆ ಎಂದು ಹೇಳಲಾಗುವುದಿಲ್ಲ. ಮನಸ್ಸಿನಿಂದ ಬ್ರಹ್ಮಚಾರಿಯಾಗಿರಿ ಅರ್ಥಾತ್ ಮನಸ್ಸಿನಿಂದಲೂ ಸಹ ಅಕರ್ಷಣೆಯಲ್ಲಿ ಬರಬಾರದು. ತಂದೆಯನ್ನು ಬಿಟ್ಟು ಬೇರೆ ಯಾವುದೇ ಪ್ರಕಾರದ ತನುವಿನಿಂದ ಬ್ರಹ್ಮಚಾರಿ, ಸಂಬಂಧದಿಂದಲೂ ಬ್ರಹ್ಮಚಾರಿ, ಸಂಸ್ಕಾರದಿಂದಲೂ ಬ್ರಹ್ಮಚಾರಿ. ಇದರ ಪರಿಭಾಷೆ ಅತೀ ಪ್ರಿಯ ಮತ್ತು ಅತೀ ಗುಹ್ಯವಾಗಿದೆ. ಇದರ ವಿಸ್ತಾರ ನಂತರ ತಿಳಿಸುತ್ತೇನೆ. ಇವತ್ತು ಹೋಲಿ ಆಚರಿಸಬೇಕಲ್ಲವೇ, ಗುಹ್ಯ ವಿದ್ಯೆಯಲ್ಲ, ಇವತ್ತು ಆಚರಿಸಬೇಕು. ಹೋಲಿ ಆಚರಿಸುವವರು ಯಾರಾಗಿದ್ದಾರೆ? ಹೋಲಿ ಹಂಸರಾಗಿದ್ದೀರಿ. ಹೋಲಿ ಹಂಸ ಎಷ್ಟೊಂದು ಸುಂದರವಾಗಿವೆ. ಹಂಸವು ಸದಾ ನೀರಿನಲ್ಲಿ ಈಜುವಂತಹದಾಗಿದೆ. ಹೋಲಿ ಹಂಸವು ಸದಾ ಜ್ಞಾನದ ನೀರಿನಲ್ಲಿ ಈಜುವಂತಹದ್ದಾಗಿದೆ. ಹಾರುವಂತಹವರು ಮತ್ತು ಈಜುವಂತಹವರು. ನೀವೆಲ್ಲರೂ ಹಾರುವುದು ಮತ್ತು ಈಜುವುದನ್ನು ತಿಳಿದುಕೊಂಡಿದ್ದೀರಲ್ಲವೇ, ಜ್ಞಾನ ಮನನ ಮಾಡುವುದು ಎಂದು ಇದಕ್ಕೇ ಹೇಳಲಾಗುವುದು. ಜ್ಞಾನಾಮೃತದಲ್ಲಿ ಈಜುವುದು ಮತ್ತು ಹಾರುವುದು ಅರ್ಥಾತ್ ಸದಾ ಶ್ರೇಷ್ಠ ಸ್ಥಿತಿಯಲ್ಲಿರುವುದು. ಎರಡನ್ನು ತಿಳಿದುಕೊಂಡಿದ್ದೀರಲ್ಲವೇ? ಎಲ್ಲರ ಮನಸ್ಸಿನಲ್ಲಿ ತಂದೆಯ ಜೊತೆ

ಪ್ರೀತಿಯಂತೂ 100% ಗಿಂತಲೂ ಹೆಚ್ಚಿದೆ ಮತ್ತು ತಂದೆಯ ಪ್ರೀತಿಯೂ ಸಹ ಪ್ರತಿಯೊಬ್ಬ ಮಗುವಿನೊಂದಿಗಿದೆ, ಅವರು ಬೀಳುತ್ತಿದ್ದರೂ, ಏರುತ್ತಿದ್ದರೂ, ಆಟವನ್ನು ಆಡುತ್ತಿದ್ದರೂ ಸಹ ಅವರು ತಂದೆಗೆ ಪ್ರಿಯರಾಗಿದ್ದಾರೆ. ತಂದೆಯು ಆಟವನ್ನು ನೋಡಿ ಇವರು ಸ್ವಲ್ಪ ತುಂಟ ಮಗುವಾಗಿದ್ದಾರೆಂದುಯತಿಳಿಯುತ್ತಾರೆ. ಎಲ್ಲಾ ಮಕ್ಕಳು ಒಂದೇ ತರಹ ಇರುವುದಿಲ್ಲವಲ್ಲವೇ! ಕೆಲವರು ತುಂಟರು, ಕೆಲವರು ಗಂಭೀರ, ಕೆಲವರು ರಮಣಿಕರಾಗಿರುತ್ತಾರೆ. ಕೆಲವರು ಬಹಳ ತೀವ್ರ ಸ್ವಭಾವದವರಾಗಿರುತ್ತಾರೆ. ಆದರೂ ಸಹ ಮಕ್ಕಳಲ್ಲವೇ. ಮಕ್ಕಳು ಎಂಬ ಶಬ್ದವೇ ಅತೀ ಪ್ರಿಯವಾಗಿದೆ. ಹೇಗೆ ನಿಮಗೆಲ್ಲರಿಗೂ ತಂದೆ ಎನ್ನುವ ಶಬ್ದವು ಪ್ರಿಯವಾಗಿದೆ. ತಂದೆಗೆ ಮಕ್ಕಳು ಪ್ರಿಯವಾಗಿದ್ದಾರೆ. ತಂದೆಯು ಎಂದೂ ಯಾವುದೇ ಮಗುವಿನಿಂದ ಹೃದಯವಿಧೀರ್ಣರಾಗುವುದಿಲ್ಲ. ಸದಾ ಶುಭಾಕಾಂಕ್ಷೆಗಳನ್ನು ಇಡುತ್ತಾರೆ. ಒಂದುವೇಳೆ ಯಾರಾದರೂ ಬಿಟ್ಟು ಹೋದರು ಬಾಪ್‌ದಾದಾರವರು ಅವರಲ್ಲಿಯೂ ಸಹ ಭರವಸೆಯನ್ನು ಇಡುತ್ತಾರೆ – ಇಂದಿಲ್ಲವೆಂದರೆ ನಾಳೆ ಬರುತ್ತಾರೆ. ಎಲ್ಲಿಗೆ ಹೋಗುವರು? ಹೇಗೆ ಶಾರೀರಿಕ ಲೆಕ್ಕಾಚಾರದಲ್ಲಿ ಯಾರೇ ಹೆಚ್ಚಿಗೆ ಅನಾರೋಗ್ಯರಾಗುತ್ತಾರೆಂದರೆ ಅವರು ಸರಿ ಹೋಗುವುದಕ್ಕೂ ಸಮಯ ಬೇಕಾಗುತ್ತದೆ. ಕೆಲವರು ಸ್ವಲ್ಪ ಸಮಯದಲ್ಲಿ ಸರಿ ಹೋಗುತ್ತಾರೆ ಇನ್ನು ಕೆಲವರು ಬಹಳ ಸಮಯಕ್ಕೆ ಸರಿ ಹೋಗುತ್ತಾರೆ. ಆದರೆ ಅನಾರೋಗ್ಯವು ಇದೆ. ಎಂತಹದ್ದೇ ಅನಾರೋಗ್ಯ ಆಗಿರಲಿ ಸ್ಥೂಲ ರೀತಿಯ ಪ್ರಮಾಣದಿಂದಲೂ ಅನಾರೋಗ್ಯದಿಂದ ಎಂದೂ ಭರವಸೆಯನ್ನು ಬಿಡುವುದಿಲ್ಲ. ಸದಾ ಇದೇ ಭರವಸೆಯಿರುತ್ತದೆ - ಇಂದು ಇಲ್ಲವೆಂದರೆ ನಾಳೆ ಸರಿಯಾಗಿ ಬಿಡುವುದು. ಇದಕ್ಕೆ ಬಾಪ್‌ದಾದಾರವರು ಎಂದೂ ಯಾವುದೇ ಮಗುವಿನ ಮೇಲೆ ಭರವಸೆಯನ್ನು ಕಳೆದುಕೊಳ್ಳುವುದಿಲ್ಲ. ಸದಾ ಶುಭ ಆಸೆಯನ್ನು ಇಡುತ್ತಾರೆ ಇವತ್ತು ಸ್ವಲ್ಪ ಸೋಮಾರಿಯಾಗಿದ್ದಾರೆ ನಾಳೆ ಬುದ್ದಿವಂತರಾಗಿ ಬಿಡುವರು. ಯಾವಾಗ ಗುರಿ ಒಂದೇಯಾಗಿದೆ. ತಂದೆ ಒಬ್ಬರೇಯಾಗಿದ್ದಾರೆ. ತಂದೆಯನ್ನು ಬಿಟ್ಟು ಎಲ್ಲಿಗೆ ಹೋಗುವರು? ಆದರೂ ಸಹ ಪ್ರತಿ ಆತ್ಮನಿಗೆ ವಾರಸತ್ವವು(ಆಸ್ತಿ) ತಂದೆಯಿಂದಲೇ ಸಿಗುವುದು. ತಂದೆಯ ನಿಂದನೆ ಮಾಡಿದರೂ ಸಹ ತಂದೆಯು ಮುಕ್ತಿಯ ವಾರಸತ್ವವನ್ನು ಕೊಡುತ್ತಾರೆ. ಇಡೀ ವಿಶ್ವದ ಸರ್ವ ಆತ್ಮರಿಗೆ ಮುಕ್ತಿ ಅಥವಾ ಜೀವನಮುಕ್ತಿಯ ವಾರಸತ್ವವಂತೂ ಅವಶ್ಯವಾಗಿ ಸಿಗಬೇಕು ಏಕೆಂದರೆ ತಂದೆಯು ಸೃಷ್ಟಿಯಲ್ಲಿ ಅವತರಿತರಾಗಿ ಮಕ್ಕಳನ್ನು ಆಸ್ತಿಯಿಂದ ವಂಚಿತರನ್ನಾಗಿ ಮಾಡಲು ಸಾಧ್ಯವಿಲ್ಲ. ತಂದೆಯು ಆಸ್ತಿಯನ್ನು ಕೊಡಲೇಬೇಕು. ಮಕ್ಕಳು ತೆಗೆದುಕೊಳ್ಳಲಿ, ಅಥವಾ ತೆಗೆದುಕೊಳ್ಳದಿರಲಿ, ತಂದೆಯಂತೂ ಕೊಡಲೇಬೇಕು. ಮತ್ತು ಸರ್ವ ಆತ್ಮರಿಗೆ ತಂದೆಯಿಂದ ವಾರಸತ್ವ ಸಿಕ್ಕಿದೆ ಅದಕ್ಕೆ ಅವರನ್ನು ತಂದೆ ಎಂದು ಕರೆಯುತ್ತಾರೆ. ತಂದೆಯ ಅರ್ಥವೇ ಆಗಿದೆ ವಾರಸತ್ವವನ್ನು ಕೊಡುವವರು. ಭಲೇ ಯಾವುದೇ ಧರ್ಮದಲ್ಲಿ ಹೋಗಿರಲಿ ಆದರೂ ಸಹ ತಂದೆ ಎಂದು ಹೇಳಿ ನೆನಪು ಮಾಡುತ್ತಾರಲ್ಲವೇ. ಒಂದು ಆತ್ಮವು ಸಹ ಆಸ್ತಿಯಿಲ್ಲದೇ ಇರಲು ಸಾಧ್ಯವಿಲ್ಲ. ಸಾಕಾರ ಸೃಷ್ಟಿಯಲ್ಲಿ ಪಾತ್ರ ಮಾಡುತ್ತಾ ಮಕ್ಕಳಿಗೆ ಆಸ್ತಿ ಕೊಡಲಿಲ್ಲವೆಂದರೆ ತಂದೆ ಎಂದು ಹೇಗೆ ಹೇಳುವುದು? ಆದರೆ ನೀವು ಡೈರೆಕ್ಟ್ (ನೇರವಾಗಿ) ಆಸ್ತಿಯನ್ನು ತೆಗೆದುಕೊಳ್ಳುತ್ತೀರಿ ಮತ್ತು ಪರಿಚಯದಿಂದ ತೆಗೆದುಕೊಳ್ಳುತ್ತೀರಿ. ನಿಮ್ಮದು ನೇರವಾಗಿ ಸಂಪರ್ಕವಿದೆ. ನಿಮಿತ್ತ, ಸಾಕಾರ ಮಾಧ್ಯಮ ಬ್ರಹ್ಮಾರವರು ಆದರು. **ಆದರೆ ಬ್ರಹ್ಮಾರವರ ಜೊತೆ ಯೋಗವನ್ನು ಜೋಡಿಸುತ್ತಿಲ್ಲ. ಯೋಗವಂತೂ ತಂದೆಯ ಜೊತೆ ಜೋಡಿಸಬೇಕು. ಬ್ರಹ್ಮಾತಂದೆಯು ಹೇಳುತ್ತಾರೆ - ತಂದೆಯನ್ನು ನೆನಪು ಮಾಡಿ ನನ್ನನ್ನು ನೆನೆಪು ಮಾಡಿ ಎಂದು ಹೇಳುವುದಿಲ್ಲ. ಪೂರ್ಣ ಆಸ್ತಿಯು ತಂದೆಯ ಸಂಬಂಧವನ್ನು ಬಿಟ್ಟರೆ ಬೇರೆ ಸಂಬಂಧದಲ್ಲಿ ಸಿಗುವುದಿಲ್ಲ.** ನೀವು ನೇರವಾಗಿ ತಂದೆಯ ಜೊತೆ ಸಂಬಂಧವನ್ನು ಜೋಡಿಸಿ ಆಸ್ತಿಯ ಅಧಿಕಾರವನ್ನು ಮೂರು ಕಾಲದಲ್ಲಿ ಪ್ರಾಪ್ತಿ ಮಾಡಿಕೊಳ್ಳುತ್ತೀರಿ. ಈಗಲೂ ಸಹ ಆಸ್ತಿ ಸಿಗುತ್ತಿದೆಯಲ್ಲವೇ! ಶಕ್ತಿಗಳು, ಗುಣಗಳ ಆಸ್ತಿ ಸಿಗುತ್ತಿದೆ. ಸಿಕ್ಕಿ ಬಿಟ್ಟಿದೆಯೇ? ಮತ್ತು ಮುಕ್ತಿಧಾಮದಲ್ಲಿಯು ಎಲ್ಲಿರುವಿರಿ ಸಮೀಪದಲ್ಲಿರುವಿರಿ. ಅಂದಾಗ ಈಗಲೂ ಆಸ್ತಿ, ಮುಕ್ತಿಧಾಮದಲ್ಲೂ ಆಸ್ತಿ ಮತ್ತು 21 ಜನ್ಮಗಳ ಆಸ್ತಿಯು ಇದೆ. ಮೂರು ಕಾಲದಲ್ಲಿ ಆಸ್ತಿಗೆ ಅಧಿಕಾರಿಗಳಾಗುತ್ತೀರಿ. ಜನರು ನಿಮಗೆ ಹೇಳುತ್ತಾರೆ ನಿಮ್ಮ ಜೀವನಮುಕ್ತಿಗಿಂತ ನಮ್ಮ ಮುಕ್ತಿ ಚೆನ್ನಾಗಿದೆ. ನೀವಂತು ಚಕ್ರದಲ್ಲಿ ಬರುತ್ತೀರಿ. ನಾವು ಚಕ್ರದಿಂದ ಮುಕ್ತರಾಗಿ ಬಿಡುತ್ತೇವೆ. ನೀವು ಹೆಮ್ಮೆಯಿಂದ ಹೇಳಬಹುದು ಮುಕ್ತಿಯ ವಾರಸತ್ವ ನಮಗೂ ಸಿಗುತ್ತದೆ ಆದರೆ ಮುಕ್ತಿಯ ನಂತರ ಜೀವನ್ಮುಕ್ತಿಯ ವಾರಸತ್ವವನ್ನು ಪಡೆಯುತ್ತೇವೆ. ಡಬಲ್ ಸಿಗುತ್ತದೆ. ಮುಕ್ತಿಧಾಮದಿಂದ ಹೋಗುತ್ತೇವಲ್ಲವೇ, ನೇರ ಸಂಪರ್ಕ ಇರುವ ಕಾರಣ

ವರ್ತಮಾನ, ಮೃತ್ಯುವಿನ ನಂತರ ಮತ್ತು ಹೊಸ ಶರೀರವನ್ನು ತೆಗೆದುಕೊಳ್ಳುತ್ತಾ ಮೂರು ಕಾಲದ ವಾರಸತ್ವಕ್ಕೆ ಅಧಿಕಾರಿಗಳಾಗುತ್ತೀರಿ. ಇಷ್ಟು ನಶೆ ಇದೆಯೇ?

ಇವತ್ತು ಹೋಲಿ ಆಚರಿಸುತ್ತೀರಲ್ಲವೇ, ಹೋಲಿಯಲ್ಲಿ ಸುಡಲಾಗುತ್ತದೆ ಮತ್ತು ಆಚರಿಸಲಾಗುತ್ತದೆ. ಮೊದಲು ಸುಡಲಾಗುತ್ತದೆ ನಂತರ ಆಚರಿಸಲಾಗುತ್ತದೆ. ಹೋಲಿ ಆಚರಿಸುವುದು ಎಂದರೆ ಸ್ವಲ್ಪ ಸುಡುವುದು ಮತ್ತು ಸ್ವಲ್ಪ ಆಚರಿಸುವುದು, ಸುಡದೆ ಆಚರಿಸಲು ಸಾಧ್ಯವಿಲ್ಲ. ದೃಢ ಸಂಕಲ್ಪದ ಅಗ್ನಿಯ ಮೂಲಕ ಮೊದಲು ತಮ್ಮ ಬಲಹೀನತೆಗಳನ್ನು ಸುಟ್ಟಾಗ ಆಚರಣೆಯ ಆನಂದದ ಅನುಭವ ಮಾಡಲು ಸಾಧ್ಯ. ಒಂದುವೇಳೆ ಸುಟ್ಟಿಲ್ಲವೆಂದರೆ ಆಚರಣೆಯ ಆನಂದದ ಅನುಭವ ಸದಾ ಕಾಲವಿರುವುದಿಲ್ಲ. ಹೋಲಿ ಶಬ್ದದಲ್ಲಿ ಸುಡುವುದು ಇದೆ ಮತ್ತು ಆಚರಿಸುವುದು ಇದೆ. ಎರಡು ಅರ್ಥವಿದೆ. ಹೋಲಿ ಶಬ್ದ ಪಕ್ಕಾ ಆಯಿತೇ? ಹೋಲಿ ಎಂದರೆ ಹೋ ಲೀ, ಕಳೆದದ್ದು ಕಳೆದು ಹೋಯಿತು. ಕಳೆದು ಹೋಗಿರುವ ಮಾತಿಗೆ ಹೇಳಲಾಗುತ್ತದೆ ಹೋ ಲಿ(ಹಿಂದಿ ಭಾಷೆಯಲ್ಲಿ). ಏನು ಆಗಬೇಕಿತ್ತೋ ಅದು ಹೋ ಲೀ. ಕಳೆದದ್ದನ್ನು ಮರೆಯುವುದು ಎಂದರೆ ಹೋಲಿ ಸುಡುವುದು ಮತ್ತು ತಂದೆಯ ಮುಂದೆ ಬಂದಾಗ ಹೇಳುತ್ತೀರಿ - ನಾನು ತಂದೆಯವರಾಗಿದ್ದೇನೆ (ಹೋ ಲಿ, ಹೋ ಗಯಿ). ಆಚರಿಸಲಾಯಿತು ಮತ್ತು ಹೋಲಿ. ಕಳೆದದ್ದು ಕಳೆದು ಹೋಯಿತು. ಕಳೆದದ್ದನ್ನು ಮರೆತು ಹೋಗುವುದು. ಇದಾಗಿದೆ ಸುಡುವುದು. ಒಂದೇ ಹೋಲಿ ಶಬ್ದದಲ್ಲಿ ಸುಡುವುದು ಮತ್ತು ಆಚರಿಸುವುದಿದೆ. ಗೀತೆಯನ್ನು ಹಾಡುತ್ತೀರಲ್ಲವೇ ನಾನಂತು ಬಾಬಾರವರವಾಗಿಬಿಟ್ಟೆನು (ಬಾಬಾ ಕಿ ಹೋ ಲಿ). ಪಕ್ಕಾ ಆಗಿದ್ದೀರಲ್ಲವೇ? ಏಕೆಂದರೆ ಬಾಪ್‌ದಾದಾರವರು ಎಲ್ಲರ ತಪಸ್ಸಿನ ಚಾರ್ಟ್‌ನ್ನು ನೋಡಿದರು. ಒಂದುವೇಳೆ ತಪಸ್ಸು ಎಂದಾದರೂ ಕಡಿಮೆಯಾಗಿದ್ದರೆ ಅದಕ್ಕೆ ಕಾರಣ ಏನಾಗಿದೆ? ಕಳೆದದ್ದು ಮರೆಯುವುದಕ್ಕೆ ಬಿಂದುವಿಡುವುದರ ಬದಲಾಗಿ ಪ್ರಶ್ನಾರ್ಥಕ ಚಿಹ್ನೆಯನ್ನು ಇಡುತ್ತಾರೆ. ಮತ್ತು ಚಿಕ್ಕ ತಪ್ಪನ್ನು ಮಾಡುತ್ತೀರಿ, ಇರುವುದು ಚಿಕ್ಕದು ಆದರೆ ಬಹಳ ದೊಡ್ಡ ನಷ್ಟವಾಗುತ್ತದೆ. ಯಾವ ತಪ್ಪನ್ನು ಮಾಡುತ್ತೀರಿ? ಯಾರನ್ನು ಮರೆಯಬೇಕು ಅವರನ್ನು ನೆನಪು ಮಾಡುತ್ತೀರಿ ಮತ್ತು ಯಾರನ್ನು ನೆನಪು ಮಾಡಬೇಕು ಅವರನ್ನು ಮರೆಯುತ್ತೀರಿ. ಮರೆಯುವುದು ಬರುತ್ತದೆಯಲ್ಲವೇ? ತಂದೆಯನ್ನು ಮರೆಯಲು ಬಯಸುವುದಿಲ್ಲ ಆದರೂ ಸಹ ಮರೆತು ಬಿಡುತ್ತೀರಿ ಮತ್ತು ಯಾವ ಸಮಯದಲ್ಲಿ ಮರೆಯಬೇಕೋ ಆ ಸಮಯದಲ್ಲಿ ಏನು ಹೇಳುತ್ತೀರಿ ಮರೆಯಲು ಬಯಸುತ್ತೇವೆ ಆದರೆ ಮರೆಯಲಾಗುವುದಿಲ್ಲ, ಪದೇ-ಪದೇ ನೆನಪು ಬರುತ್ತದೆ. ಅಂದಾಗ ನೆನಪು ಮಾಡುವುದು ಮತ್ತು ಮರೆಯುವುದು ಎರಡು ಮಾತುಗಳು ಬರುತ್ತವೆ. ಆದರೆ ಏನು ಮರೆಯುವುದು ಮತ್ತು ಏನು ನೆನಪಿಸುವುದು? ಯಾವ ಸಮಯದಲ್ಲಿ ಮರೆಯಬೇಕೋ ಆಗ ನೆನಪು ಮಾಡುತ್ತೀರಿ ಮತ್ತು ಯಾವಾಗ ನೆನಪು ಮಾಡಬೇಕೋ ಆಗ ಮರೆಯುತ್ತೀರಿ. ಚಿಕ್ಕ ತಪ್ಪಿದೆಯಲ್ಲವೇ? ಇದನ್ನೆ ಹೋ ಲಿ ಮಾಡಿರಿ. ಸುಟ್ಟು ಬಿಡಿ. ಅಂಶದಿಂದ ಸಮಾಪ್ತಿ ಮಾಡಿಬಿಡಿ. ಜ್ಞಾನಿ ಆತ್ಮರಾಗಿದ್ದೀರಲ್ಲವೇ? ಜ್ಞಾನಿಯ ಅರ್ಥವಾಗಿದೆ ಬುದ್ಧಿವಂತರು, ಮತ್ತು ನೀವಂತು ಮೂರು ಕಾಲದ ಬುದ್ಧಿವಂತರಾಗಿದ್ದೀರಿ. ಅದಕ್ಕೆ ಹೋಲಿ ಆಚರಿಸುವುದು ಎಂದರೆ ಈ ತಪ್ಪನ್ನು ಸುಡುವುದು. ಯಾವುದನ್ನು ಮರೆಯಬೇಕು ಅದನ್ನು ಸೆಕೆಂಡಿನಲ್ಲಿ ಮರೆಯುವುದು ಮತ್ತು ಯಾವುದನ್ನು ನೆನಪು ಮಾಡಬೇಕು ಅದು ಸೆಕೆಂಡಿನಲ್ಲಿ ನೆನಪು ಬರುವುದು. ಕಾರಣ ಕೇವಲ ಬಿಂದುವಿನ ಬದಲಾಗಿ ಪ್ರಶ್ನಾರ್ಥಕ ಚಿಹ್ನೆಯಿದೆ. ಏಕೆ ಯೋಚಿಸಿದಾಕ್ಷಣ ಕ್ಯೂ ಆರಂಭವಾಗಿಬಿಡುತ್ತದೆ. ಹೀಗೆ, ಹಾಗೆ, ಏಕೆ. ಏನು...ಎಂಬ ಕೇವಲ ಪ್ರಶ್ನಾರ್ಥಕ ಚಿಹ್ನೆಯಿಡುವುದರಿಂದ ದೊಡ್ಡ ಸಾರಂಶವಾಗಿಬಿಡುತ್ತದೆ. ಮತ್ತು ಬಿಂದು ಇಡುವುದರಿಂದ. ಏನಾಗುವುದು? ನೀವೂ ಬಿಂದು, ತಂದೆಯೂ ಬಿಂದು & ವ್ಯರ್ಥಕ್ಕೂ ಬಿಂದು. ಫುಲ್ ಸ್ಟಾಪ್, ಸ್ಟಾಪ್ ಅಲ್ಲ ಫುಲ್ ಸ್ಟಾಪ್. ಇದಕ್ಕೆ ಹೇಳಲಾಗುತ್ತದೆ ಹೋಲಿ. ಈ ಹೋಲಿಯಿಂದ ಸದಾ ತಂದೆಯ ಸಾಂಗತ್ಯದ ರಂಗಿನ ಹೋಲಿ, ಮಿಲನದ ಹೋಲಿಯನ್ನು ಆಚರಿಸಿಕೊಳ್ಳುತ್ತಾ ಇರುತ್ತೀರಿ. ಎಲ್ಲದಕ್ಕಿಂತ ಪಕ್ಕಾ ಬಣ್ಣ ಯಾವುದಾಗಿದೆ? ಸ್ಥೂಲವಾದ ಬಣ್ಣ ಎಷ್ಟೇ ಗಟ್ಟಿಯಾಗಿ ಅಂಟಿಕೊಂಡರು ಎಲ್ಲದಕ್ಕಿಂತ ಶ್ರೇಷ್ಠವಾದ ಮತ್ತು ಗಟ್ಟಿಯಾದ ಬಣ್ಣ ತಂದೆಯ ಸಾಂಗತ್ಯವೆಂಬ ಬಣ್ಣ. ಆದ್ದರಿಂದ ಈ ಬಣ್ಣದಿಂದ ಆಚರಿಸಿಕೊಳ್ಳಿರಿ. ಗೋಪ ಗೋಪಿಯರು ಹೋಲಿ ಆಚರಿಸಿಕೊಳ್ಳುವುದು ನಿಮ್ಮ ಸ್ಮೃತಿಚಿಹ್ನೆಯೇ ಆಗಿದೆ. ಈ ಚಿತ್ರದಲ್ಲಿ ಏನು ತೋರಿಸುತ್ತಾರೆ ತಂದೆ ಮತ್ತು ನೀವು ಇಬ್ಬರು ಜೊತೆಯಾಗಿ ಹೋಲಿಯನ್ನು ಆಡುತ್ತಿದ್ದಂತೆ ಇರುತ್ತದೆ. ಒಂದೊಂದು ಗೋಪಗೋಪಿಕೆಯೊಂದಿಗೆ ಗೋಪಿವಲ್ಲಭನನ್ನು ತೋರಿಸುತ್ತಾರೆ. ಎಂದರೆ ಅದು ಸಾಂಗತ್ಯವಾಯಿತು

ತಾನೇ? ಜೊತೆ ಮತ್ತು ಸಾಂಗತ್ಯದ ಅವಿನಾಶಿ ಹೋಲಿ, ತಂದೆಯ ಸಾಂಗತ್ಯದ ಬಣ್ಣಕ್ಕೆ ಸ್ಮೃತಿಚಿಹ್ನೆಯಾಗಿ ಹೋಲಿಯ ನೃತ್ಯವನ್ನು ತೋರಿಸಿದ್ದಾರೆ. ಹಾಗಾದರೆ ಹೋಲಿಯನ್ನು ಆಚರಿಸಲು ಬರುತ್ತದೆ ತಾನೇ? ಇದಾಗಿ ಹೋಯಿತು, ಏನು ಮಾಡಲಿ, ಇಷ್ಟವಿಲ್ಲ ಆದರೆ ಆಗಿ ಹೋಯಿತು. ಇಂದಿನಿಂದ ಇವೆಲ್ಲವುಗಳನ್ನು ಸುಟ್ಟು ಹಾಕಿರಿ ಅರ್ಥಾತ್ ಸಮಾಪ್ತಿ ಮಾಡುವ ಹೋಲಿಯನ್ನು ಆಚರಿಸಿಕೊಳ್ಳಿರಿ ಮಾಸ್ಟರ್ ಸರ್ವಶಕ್ತಿವಂತರು ಸಂಕಲ್ಪದಲ್ಲಿಯೂ ಯಾವಾಗಲೂ ಕೂಡ ಈ ರೀತಿಯ ಆಲೋಚನೆಯನ್ನು ಮಾಡುವುದಿಲ್ಲ ಒಳ್ಳೆಯದು.

ಡಬಲ್ ವಿದೇಶಿಯರು ಸಹ ಒಳ್ಳೆಯ ಸೇವೆಯ ವೃದ್ಧಿಯಲ್ಲಿ ಮುಂದುವರೆಯುತ್ತೀದ್ದೀರಿ. ತಂದೆಯೊಂದಿಗೂ ಪ್ರೀತಿಯಿದೆ ಮತ್ತು ಸೇವೆಯೊಂದಿಗೂ ಪ್ರೀತಿಯಿದೆ ಸೇವೆ ಎಂದರೆ ಸ್ವ ಮತ್ತು ಸರ್ವ ಆತ್ಮರ ಜೊತೆ-ಜೊತೆಯ ಸೇವೆ ಮೊದಲು ಸ್ವ ಏಕೆಂದರೆ ಸ್ವ ಸ್ಥಿತಿಯುಳ್ಳವರೇ ಅನ್ಯ ಆತ್ಮರನ್ನು ಪರಿಸ್ಥಿತಿಗಳಿಂದ ಹೊರ ತೆಗೆಯಬಹುದು. ಸೇವೆಯ ಸಫಲತೆಯಾಗಿದೆ - ಸ್ವ ಮತ್ತು ಸರ್ವರ ಬ್ಯಾಲೆನ್ಸ್‌ನ ಸ್ಥಿತಿ. ಈ ರೀತಿ ಎಂದಿಗೂ ಹೇಳಬೇಡಿ ಸೇವೆಯಲ್ಲಿ ಬಹಳ ವ್ಯಸ್ಥವಾಗಿದ್ದೇವೆ ಅದಕ್ಕೆ ಸ್ವ ಸ್ಥಿತಿಯ ಚಾರ್ಟ್ ಸ್ವಲ್ಪ ಕಡಿಮೆಯಿದೆ. ಒಂದು ಕಡೆ ಸಂಪಾದನೆ. ಇನ್ನೊಂದು ಕಡೆ ಕಳೆದುಕೊಂಡರೆ ಏನು ಉಳಿಯಿತು? ಇದಕ್ಕಾಗಿಯೇ ತಂದೆ ಮತ್ತು ನೀವು ಕಂಬೈಂಡ್ ಆಗಿದ್ದೀರಿ, ಶರೀರ ಮತ್ತು ಆತ್ಮ ಕಂಬೈಂಡ್ ಆಗಿದೆ. ನಿಮ್ಮ ಭವಿಷ್ಯ ವಿಷ್ಣು ಸ್ವರೂಪ ಕಂಬೈಂಡ್ ಆಗಿದೆ. ಈ ರೀತಿ ಸ್ವ - ಸೇವೆ ಮತ್ತು ಸರ್ವರ ಸೇವೆ ಕಂಬೈಂಡ್ ಆಗಿದೆ. ಇದನ್ನು ಬೇರೆ ಮಾಡಬೇಡಿ. ಇಲ್ಲವೆಂದರೆ ಪರಿಶ್ರಮ ಹೆಚ್ಚಿಗೆ ಮತ್ತು ಸಫಲತೆ ಕಡಿಮೆ ಸಿಗುತ್ತದೆ. ಅರ್ಥವಾಗಿ ಹೋಯಿತಲ್ಲವೇ!

ಈ ಗ್ರೂಪ್‌ನಲ್ಲಿಯು ಸಹ ಸೆಕೆಂಡ್ ನಂಬರ್‌ನವರು ಹೆಚ್ಚಿಗೆ ಇದ್ದಾರೆ. ಮೊದಲನೇ ನಂಬರ್‌ನವರು ಕಡಿಮೆಯಿದ್ದಾರೆಂದರೆ, ನಾಲ್ಕನೇ ಐದನೇದವರು ಕಡಿಮೆಯಿದ್ದಾರೆ. ಸೆಕೆಂಡ್ (ಎರಡನೇ) ನಂಬರ್‌ವರೆಗೂ ಹೋಗಿದ್ದೀರಿ ಅಂದಮೇಲೆ ಎರಡರ ನಂತರ ಮುಂದೆ ಏನಿದೆ? ಒಂದು ಇದೆಯಲ್ಲವೇ. ಎರಡರವರೆಗೂ ಹೆಜ್ಜೆ ಇಟ್ಟಿದ್ದೀರೆಂದ ಮೇಲೆ ಇನ್ನು ಒಂದು ಹೆಜ್ಜೆ ಮೊದಲ ನಂಬರಿನಲ್ಲಿಡಬೇಕಾಗಿದೆ. ಅದರ ವಿಧಿಯಾಗಿದೆ - ಕಂಬೈಂಡ್ ಸ್ವರೂಪದಿಂದ ಸೇವೆ. ಮಕ್ಕಳು ಸೇವೆಯ ಪ್ಲಾನ್ ಕೂಡ ಮಾಡುತ್ತಿದ್ದಾರಲ್ಲವೇ. ಬಾಪ್‌ದಾದಾರವರಂತೂ ಸೂಚನೆ ಕೊಟ್ಟಿದ್ದರು ಈಗ ಸಮಯ ಪ್ರಮಾಣ ಏನು ಸೇವೆ ಮಾಡಿದ್ದೀರೋ ಬಹಳ ಚೆನ್ನಾಗಿ ಮಾಡಿದ್ದೀರಿ. ಇದರಿಂದ ತಂದೆಯನ್ನು, ತಮ್ಮನ್ನು ಪ್ರತ್ಯಕ್ಷ ಮಾಡಿದ್ದೀರಿ. ವಾಯುಮಂಡಲ ಮತ್ತು ವೈಬ್ರೇಷನ್ ಪರಿವರ್ತನೆಯಾಗಿದೆ. ಸ್ನೇಹಿ ಮತ್ತು ಸಹಯೋಗಿ ಆತ್ಮರು ನಾಲ್ಕಾರು ಕಡೆಯ ಸಾಕಷ್ಟು ಸಂಖ್ಯೆಯಲ್ಲಿ ಸಮೀಪ ಬಂದಿದ್ದೀರಿ. ಈಗ ಇಂತಹ ಸೇವೆಯನ್ನು ಮಾಡಿರಿ ಒಬ್ಬರಿಂದ ಅನೇಕರ ಸೇವೆಯಾಗಲಿ. ಇಡೀ ವಿಶ್ವಕ್ಕೆ ಸಂದೇಶ ಕೊಡಬೇಕು. ಒಬ್ಬೊಬ್ಬರಿಗೆ ಸಂದೇಶ ಕೊಡುತ್ತಾ ರಾಜಧಾನಿಯಲ್ಲಿ ಬರುವಂತಹ ಆತ್ಮರು ತಮ್ಮ ಭಾಗ್ಯವನ್ನು ಮಾಡಿಕೊಂಡು ಮುಂದೆ ಬಂದು ಬಿಟ್ಟಿದ್ದಾರೆ. ಆದರೆ ಈಗ ಸಂದೇಶ ಕೊಡುವಂತಹ ಸಂಖ್ಯೆಯು ರಾಜ್ಯ ಅಧಿಕಾರಿ ಮಕ್ಕಳಗಿಂತಲೂ ಹೆಚ್ಚಿಗೆಯಿದೆ. ರಾಜ್ಯ ಪರಿವಾರದಲ್ಲಿ ಬರುವವರು ಮತ್ತು ರಾಜ್ಯ ಸಿಂಹಾಸನದ ಮೇಲೆ ಕುಳಿತುಕೊಳ್ಳುವವರು ಇಬ್ಬರು ಒಳ್ಳೆಯವರಾಗಿದ್ದಾರೆ. ರಾಜ್ಯ ಅಧಿಕಾರಿಗಳು ನೀವೇ ಆಗುತ್ತೀರಲ್ಲವೇ. ನೀವಾಗುತ್ತೀರಾ ಅಥವಾ ಬೇರೆಯವರನ್ನು ಮಾಡುತ್ತೀರಾ? ಬೇರೆಯವರನ್ನು ರಾಜ್ಯಾಧಿಕಾರಿಯನ್ನಾಗಿ ಮಾಡುತ್ತೀರಾ ಮತ್ತು - ನೀವೇನಾಗುತ್ತೀರಿ? ಒಳ್ಳೆಯದು-

ಈಗ ನಾಲ್ಕು ದಿಕ್ಕಿನಲ್ಲಿ ಸಂದೇಶವನ್ನು ತಲುಪಿಸಲು ಇಂತಹ ಆತ್ಮರನ್ನು ಸಮೀಪಕ್ಕೆ ತನ್ನಿರಿ - ಒಬ್ಬರು ಅನೇಕರಿಗೆ ನಿಮಿತ್ತರಾಗಬೇಕು ಆಗ ಸಂದೇಶ ಕೊಡುವುದು ವೇಗವಾಗಿ ಆಗುತ್ತದೆ ಆದ್ದರಿಂದ ಬಾಪ್‌ದಾದಾ ಇಷ್ಟಕ್ಕೆ ಮುಂಚೆ ಕೂಡ ತಿಳಿಸಿದ್ದರು. ಎಲ್ಲಿ ಜಾಸ್ತಿ ಸಂಖ್ಯೆಯಲ್ಲಿ ಜನ ಇರುತ್ತಾರೆಯೋ ಅಲ್ಲಿಯೇ ಸಂಸ್ಥೆಗಳು ಮತ್ತು ಪರಿಶ್ರಮದಲ್ಲಿ ಹೆಚ್ಚಿನ ಜನ ಇರುತ್ತಾರೆ. ಆದ್ದರಿಂದ ಅಂತಹ ಆತ್ಮರನ್ನು ನಿಮಿತ್ತರನ್ನಾಗಿ ಮಾಡಿರಿ. ಅವರು ಸೇವೆಯಲ್ಲಿ ನಿಮಗೆ ಸಹಯೋಗಿಗಳಾಗಿ ಇತರರನ್ನು ಸಮೀಪಕ್ಕೆ ತರಬೇಕು. ನೀವು ಸಂದೇಶವನ್ನು ಕೊಡುತ್ತಾ ಮುಂದಕ್ಕೆ ಹೋಗುತ್ತಿರಬೇಕು ಸಂದೇಶವನ್ನು ಕೊಡಲು ಅವರನ್ನು ನಿಮಿತ್ತ ಮಾಡಬೇಕು. ಈಗ ಆತ್ಮರಾದ ನಿಮ್ಮ ಸ್ಥಿತಿಯ ಪ್ರಕಾರ ನಿಮಗೆ ತಯಾರಾಗಿರುವ ವೇದಿಕೆ ಲಭಿಸುತ್ತದೆ. ಸೇವೆಯಲ್ಲಿ ತನು, ಮನ, ಧನಗಳನ್ನು ಉಪಯೋಗಿಸುವ

ಅವಕಾಶವನ್ನು ಇತರರಿಗೆ ಕೊಡಿ ಅವರು ತನುವನ್ನು ಉಪಯೋಗಿಸಿದರೂ, ಮನಸ್ಸನ್ನು ಉಪಯೋಗಿಸಿದರೂ, ಧನವನ್ನು ಉಪಯೋಗಿಸಿದರೂ ಉಪಯೋಗಿಸಿದಾಗಲೇ ಸತ್ಯಯುಗೀ ಪ್ರಜೆಗಳಲ್ಲಿ ಬರುತ್ತಾರೆ. ಅವರಿಗೆ ಬೀಜವನ್ನು ಬಿತ್ತಲು ಬಿಡಿ. ನೀವಾದರೆ ಬಿತ್ತಿಕೊಂಡಿದ್ದೀರಿ ಮತ್ತು ಫಲವನ್ನು ಪಡೆಯುತ್ತಿದ್ದೀರಿ. ಒಂದು ತಿಂಗಳು ಅಥವಾ ಎರಡು ತಿಂಗಳ ವರೆಗೆ ಕೆಲವರು ಒಂದು ಕಡೆ ಇನ್ನು ಕೆಲವರು ಮತ್ತೊಂದು ಕಡೆ ಸಂದೇಶವನ್ನು ಕೊಡಲು ನಿಮಿತ್ತವಾಗಬೇಕು. ಈಗ ಅಂತಹ ಗ್ರೂಪನ್ನು ತಯಾರು ಮಾಡಿರಿ ಒಂದೇ ಸಮಯದಲ್ಲಿ ಏಳು ಎಂಟು ಗ್ರೂಪ್ ಗಳನ್ನು ತಯಾರು ಮಾಡಿರಿ. ಮತ್ತು ಒಂದೊಂದು ಗ್ರೂಪ್ ನವರು ಅವರವರ ಪ್ರಾಂತಗಳಲ್ಲಿ ಸೇವೆಯನ್ನು ಮಾಡಬೇಕು ಸಣ್ಣ ದೇಶವಾದರೂ ದೊಡ್ಡ ದೇಶವಾದರೂ ಯಾರಿಗೆ ಯಾವುದು ಸಮೀಪವೋ ಅಲ್ಲಿಂದ ಗ್ರೂಪನ್ನು ತಯಾರು ಮಾಡಿ ಆ ಗ್ರೂಪನ್ನು ಕಳುಹಿಸಿರಿ ಆದರೆ ಆ ಗ್ರೂಪ್ ಕೂಡ ಸೇವೆಯ ವಿಧಿಯನ್ನು ಬುದ್ಧಿಯಲ್ಲಿ ಇಟ್ಟುಕೊಳ್ಳಬೇಕು. ಇತರರನ್ನು ಏಳಿಸಬಲ್ಲ ಮುಖ್ಯವಾದವರನ್ನು ಎಚ್ಚೆತ್ತುವಂತೆ ಮಾಡಬೇಕು.  ಅಲ್ಲಿಂದ ತಯಾರು ಮಾಡಿರಿ ಮತ್ತು ಮುಂದಕ್ಕೆ ಹೋಗುತ್ತಾ ಇರಿ ಏಕೆಂದರೆ ಸೇವೆಯನ್ನು ವೃದ್ಧಿ ಮಾಡಬೇಕೆಂದು ಕೊಂಡಾಗ ಸಹಯೋಗಿಗಳು ಎಲ್ಲಿಂದ ಬರುತ್ತಾರೆ ಎಂದು ಮೊದಲ ಪ್ರಶ್ನೆ ಬರುತ್ತದೆ ಪ್ರತಿ ಪ್ರಾಂತದಲ್ಲಿ ಈ ವಿಧವಾದ ಆತ್ಮರನ್ನು ತಯಾರಿಸಿರಿ ಮತ್ತು ತಯಾರಾದವರಿಗೆ ಮತ್ತು ನಂಬಿಕೆಯುಳ್ಳ ಸಹಯೋಗಿಗಳಿಗೆ ವಿಶೇಷ ಸಮಯವನ್ನು ತೆಗೆದು ಶಿಕ್ಷಣವನ್ನು ಕೊಡಿ ಅವರು ಆಗ ನಡೆಯುತ್ತಾ ಇರುತ್ತಾರೆ ನಿಮಿತ್ತವಾದವರು ಮಾತ್ರ ಸುತ್ತಲೂ ತಿರುಗುತ್ತಾ ಇರಬೇಕು. ಹಳೆಯ ಸೆಂಟರ್ ಆದರೆ ಪಕ್ಕಾ ಆಗಿಬಿಟ್ಟಿದೆ ಆದ್ದರಿಂದ ಹೊಸ ಸ್ಥಾನಗಳನ್ನು ಸುತ್ತಾಡುತ್ತಾ ಹೊಸವರನ್ನು ಹಳೆಯವರನ್ನಾಗಿ ತಯಾರು ಮಾಡಿರಿ. ಯೋಗ್ಯ ಸಹಯೋಗಿಗಳನ್ನು ತಯಾರು ಮಾಡುವ ಸಾಧನ- ಸಮಯಾನುಸಾರ ಸಹಯೋಗಿಗಳಿಗೆ ಶಿಕ್ಷಣವನ್ನು ಕೊಡಬೇಕು. ಸಮೀಪವಿರುವವರು ಎಂಟು ಜನರಿದ್ದರೂ, 10 ಜನರಿದ್ದರೂ ಸಮಯನುಸಾರ ಶಿಕ್ಷಣವನ್ನು ಕೊಡುವುದು ಬಹಳ ಅವಶ್ಯಕವಾಗಿದೆ. ಹೇಗಾದರೆ ಮೊದಲಿನಲ್ಲಿ ಭಾರತ ದೇಶದಲ್ಲಿಯೂ ಯುವಕರ ಗ್ರೂಪ್, ವಿದ್ಯಾವಂತರ ಗ್ರೂಪ್ ವೈದ್ಯರ ಗ್ರೂಪ್ ಎಂದು ತಯಾರು ಮಾಡಿದ್ದೀರಿ ತಾನೆ? ಹಾಗೆಯೇ ಇನ್ನುಳಿದ ಸ್ಥಾನಗಳಲ್ಲಿ ಕೂಡ ಇಲ್ಲಿಂದ ಯಾರೋ ಒಬ್ಬರನ್ನು ನಿಮಿತ್ತ ಮಾಡಬೇಕು ಎಂಬ ಲಕ್ಷ್ಯವನ್ನು ಇಡಿ. ನಿಮಿತ್ತವಾಗಿ ಮಾಡುತ್ತಾ ಇರಿ. ಮುಂದಕ್ಕೆ ಹೋಗುತ್ತಾ ಇರಿ. ಈಗ ನಿಮಗೆ ಸಂಬಂಧ ಸಂಪರ್ಕಗಳು ಬಹಳಷ್ಟು ತಯಾರಾಗಿವೆ ಎಲ್ಲರಲ್ಲಿ ಪ್ರಭಾವ ಕೂಡ ಬಹಳ ಬಿದ್ದಿದೆ. ಲಕ್ಷ್ಯವನ್ನು ಇಟ್ಟುಕೊಂಡರೆ ಅಂತಹ ಸಹಯೋಗಿ ಆತ್ಮರು ಕೂಡ ಸಿಗುತ್ತಾರೆ. ಕಾನ್ಫರೆನ್ಸ್ಗಳು ಯೋಗ ಶಿಬಿರಗಳನ್ನು ಇಡುವುದು, ಉಪನ್ಯಾಸ ಹೇಳಿ ಬರುವುದೇ ಅಲ್ಲ ಸಹಯೋಗಿಗಳನ್ನು ತಯಾರು ಮಾಡಬೇಕೆಂಬ ಲಕ್ಷ್ಯವಿರಬೇಕು. ಗೀತಾ ಪಾಠಶಾಲೆಗಳಂತೆ ನಡೆಸಿರಿ, ನಿಧಾನವಾಗಿ ಗೀತಾ ಪಾಠಶಾಲೆಗಳಿಂದ ಉಪಸೇವಾ ಕೇಂದ್ರವಾಗಿ, ಉಪಸೇವಾ ಕೇಂದ್ರದಿಂದ ಕೇಂದ್ರವಾಗಿ ಬಿಡುತ್ತವೆ. ಆದರೆ ಯಾವ ಗುಂಪು ಎಲ್ಲಿಗೆ ಹೋದರೂ ಕಂಬೈನ್ಡ್ ಸೇವೆ ಇರದೇ ಸಫಲತೆ ಲಭಿಸುವುದು ಅಸಂಭವ. ಸೇವೆ ಮಾಡಲು ಹೋಗಿ ಬಂದಿರುವ ನಂತರ ಮಾಯೆ ಬಂದಿತು ಮೂಡ್ ಆಫ್ ಆಯಿತು ಎನ್ನಬಾರದು. ಈ ಕಾರಣದಿಂದ ನಿಮಿತ್ತ ಆತ್ಮರು ನಿಮ್ಮನ್ನು ಕಳುಹಿಸಲು ಕೂಡ ಭಯಪಡುತ್ತಾರೆ, ಧೈರ್ಯ ಸಾಲುವುದಿಲ್ಲ. ಇತರರ ಸೇವೆಯನ್ನು ಮಾಡುತ್ತಾ ಇವರು ಬಲಹೀನವಾಗುವುದಿಲ್ಲವೇ? ಎಂದು ಯೋಚಿಸುತ್ತಾರೆ ಆದ್ದರಿಂದ **ಇದನ್ನು ಅಂಡರ್ ಲೈನ್ ಮಾಡಿಕೊಳ್ಳಿ ಸೇವೆಯಲ್ಲಿ ಸಫಲತೆ ಅಥವಾ ಸೇವೆಯ ವೃದ್ಧಿಗೆ ಸಾಧನ ಸ್ವ ಮತ್ತು ಸರ್ವರ ಸೇವೆ ಕಂಬೈನ್ಡ್ ಆಗಿ ಇರಬೇಕು.**

ಡಬಲ್ ವಿದೇಶಿಯರೆಲ್ಲರೂ ಎಲ್ಲಾ ಸ್ಥಾನಗಳಿಂದ ಪ್ರಿಯಸ್ಮೃತಿಗಳನ್ನು, ಉತ್ತರಗಳನ್ನು ಬಹಳ ತಂದಿದ್ದಾರೆ ಅವರಿಗೆ ಮೂರು ವಿಧವಾದ ಉತ್ತರಗಳು ತಲುಪಿದೆ. ಅತಿ ಸ್ನೇಹದಿಂದ ಶುಭ ವಾರ್ತೆಗಳಿರುವ ಉತ್ತರಗಳು ಪುರುಷಾರ್ಥದಲ್ಲಿ ಮುಂದಕ್ಕೆ ಸಾಗಲು ಯಾವ ವಿಧವಾದ ಲಕ್ಷ್ಯವಿಟ್ಟುಕೊಂಡಿದ್ದಾರೆಯೋ ಆ ಸಮಾಚಾರದಿಂದಿರುವ ಉತ್ತರಗಳು ಮತ್ತು ಮಧ್ಯ ಮಧ್ಯದಲ್ಲಿ ಸ್ವಲ್ಪ ಸ್ವಲ್ಪ ಮಾಡಿರುವ ತುಂಟತನದ ಉತ್ತರಗಳು ಒಬ್ಬೊಬ್ಬರು ಒಂದೊಂದು ಬರೆದಿದ್ದಾರೆ. ಆದರೆ ಉತ್ತರ ಬರೆಯುವ ಮಕ್ಕಳೆಲ್ಲರಿಗೂ ಬಾಪ್‌ದಾದಾ ಇದೇ ಪ್ರತ್ಯುತ್ತರವನ್ನು ತಿಳಿಸುತ್ತಿದ್ದಾರೆ. ಸದಾ ಕಂಬೈನ್ಡ್ ಸ್ಥಿತಿ ಅರ್ಥಾತ್ ಬಾಬಾ ಮತ್ತು ನೀವು ಕಂಬೈನ್ಡ್ ಸೇವೆ ಮತ್ತು ಸದಾ ಫರಿಶ್ತಾ ಸ್ವರೂಪದ ಸಂಪೂರ್ಣ ಲಕ್ಷ್ಯವನ್ನು ಎದುರಿಗೆ ಇಟ್ಟುಕೊಳ್ಳಿರಿ ಇಂದು ಪುರುಷಾರ್ಥಿ, ನಾಳೆ ಫರಿಶ್ತಾ ಹೇಗಾದರೆ ಸ್ವಯಂನ

ಸ್ವರೂಪ ಸದಾ ಸ್ಮೃತಿಯಲ್ಲಿ ಇರುತ್ತದೆಯೇ? ಹೇಗೆ ನಿಮ್ಮ ಸ್ಥೂಲ ರೂಪವನ್ನು ಎಂದೂ ಮರೆತು ಹೋಗುವುದಿಲ್ಲವೋ ಅದೇ ರೀತಿಯಾಗಿ ನಿಮ್ಮ ಫರಿಶ್ತಾ ಸ್ವರೂಪ ಸದಾ ಸ್ಪಷ್ಟವಾಗಿ ಎದುರಿಗೆ ಇರಬೇಕು. ಈಗ ಇನ್ನೇನು ತಯಾರಾಗಿ ಬಿಟ್ಟಿದ್ದೇವೆ ಎಂಬಂತೆ ಇರಬೇಕು. ಫರಿಶ್ತಾ ಆಗಿ ಇರುತ್ತಿದ್ದೆವು, ಈಗ ಫರಿಶ್ತಾ ಮತ್ತು ಕಲ್ಪಕಲ್ಪ ನಾವೇ ಆಗುತ್ತೇವೆ ಎಂದು ತಿಳಿಯಬೇಕು. ಧೈರ್ಯ, ಉಲ್ಲಾಸ, ಉತ್ಸಾಹಗಳಿಂದ ಹಾರುತ್ತ ಇರಿ. ಸ್ವಚ್ಛವಾದ ಹೃದಯದಿಂದ ಬರೆಯುತ್ತಾರೆ ಬಹಳ ಒಳ್ಳೆಯದು. ಡಬಲ್ ವಿದೇಶಿಯರ ವಿಶೇಷತೆ ಇದು- ಸ್ಪಷ್ಟವಾಗಿ ಇರುತ್ತಾರೆ ಇವರು ಮುಚ್ಚಿಡುವುದಿಲ್ಲ ಸ್ಪಷ್ಟ ಅರ್ಥಾತ್ ಶ್ರೇಷ್ಠ ಡಬಲ್ ವಿದೇಶಿಯರಲ್ಲಿ ಪರಿಶೀಲನಾ ಶಕ್ತಿ ಬಹಳ ಚೆನ್ನಾಗಿದೆ ಆದರೆ ಈಗ ಪರಿವರ್ತನಾ ಶಕ್ತಿಯನ್ನು ಕೂಡ ಅಷ್ಟೇ ಉಳಿಸಿಕೊಳ್ಳಿರಿ ಪರಿಶೀಲನೆ ಹೆಚ್ಚಾಗಿದೆ ಪರಿವರ್ತನೆಯ ಪರ್ಸೆಂಟೇಜ್ ಕಡಿಮೆ ಇದೆ ಇವುಗಳ ಸಮಾನತೆ ಕೂಡ ಇರಬೇಕು ಸ್ಪಷ್ಟವಾಗಿ ಮತ್ತು ಶ್ರೇಷ್ಠವಾಗಿ ಪರಿಶೀಲನೆ ಮತ್ತು ಪರಿವರ್ತನೆ ಇರಬೇಕು ತಿಳಿಯಿತೇ? ಎಲ್ಲರ ಉತ್ತರಗಳು ಸೇರಿಕೊಂಡಿವೆ ಪ್ರಿಯ ಸ್ಮೃತಿ ಬಹಳ ಮನಸ್ಪೂರ್ವಕವಾಗಿ ಕೊಡುತ್ತಾರೆ ಮತ್ತು ತೆಗೆದುಕೊಳ್ಳುತ್ತಾರೆ. ಬಲಹೀನತೆಯನ್ನು ಬರೆದರೆ ತಂದೆ ಕ್ಷಮಾ ಸಾಗರನಾದುದರಿಂದ ಆ ಸಮಯದಲ್ಲಿಯೇ ಕ್ಷಮಿಸಿ ಬಿಡುತ್ತಾರೆ. ಬಹಳ ಪ್ರೀತಿಯಿಂದ ಕಾರ್ಡುಗಳನ್ನು, ಬಹಳ ಪ್ರೀತಿಯಿಂದ ಬರೆದಿರುವ ಉತ್ತರಗಳು ಬಾಪ್‌ದಾದಾ ನೋಡುತ್ತಿದ್ದಾರೆ. ಬಹುಮಾನವನ್ನು ಕೊಡುವ ನೀವೇ ತಂದೆಗೆ ಬಹುಮಾನ. ಬಹುಮಾನ ಕೊಡುವುದು ಅರ್ಥಾಥ್ ಸಹಾಯವನ್ನು ಪಡೆಯುವುದು. ಆದ್ದರಿಂದ ಬಹುಮಾನವನ್ನು ಕೊಡುವುದೇ ಅಲ್ಲ ಸಹಾಯವನ್ನು ಕೂಡ ಪಡೆಯಬೇಕು, ಒಳ್ಳೆಯದು. ಕಲ್ಪಪೂರ್ವದ ವಾರಸತ್ವವನ್ನು ಪಡೆಯಲು ಹೊಸ ಹೊಸ ಮಕ್ಕಳೆಲ್ಲರೂ ಬಂದಿದ್ದಾರೆ. ಅವರನ್ನು ಬಾಪ್‌ದಾದಾ ಸ್ವಾಗತಿಸುತ್ತಿದ್ದಾರೆ ಮತ್ತು ಹೊಸ ಜನ್ಮದ ಜನ್ಮದಿನ ಶುಭಾಶಯಗಳನ್ನು ತಿಳಿಸುತ್ತಿದ್ದಾರೆ.

**ನಾಲ್ಕಾರು ಕಡೆಯ ಸರ್ವ ಕಂಬೈಂಡ್ ಸ್ಥಿತಿಯಲ್ಲಿ ಸ್ಥಿತರಾಗುವಂತಹ, ಸದಾ ಕಂಬೈಂಡ್ ಸೇವೆಯಲ್ಲಿ ಅವಿಶ್ರಾಂತ ಸೇವೆಯಿಂದ ನಿಮಿತ್ತರಾಗುವಂತಹ, ಸದಾ ಕಳೆದುಹೋಗಿರುವುದನ್ನು ಮರೆತು ತಂದೆಯ ಸಂಗದ ರಂಗಿನ ಹೋಲಿಯನ್ನು ಆಚರಿಸುವ ಹೋಲಿಹಂಸ ಆತ್ಮರು, ಸದಾ ಮೂರು ಕಾಲದ ವಾರಸತ್ವದ ಖುಷಿಯಲ್ಲಿರುವಂತಹ, ಸದಾ ಸಾಕ್ಷಿಯಾಗಿ ಪ್ರಕೃತಿ ಮತ್ತು ಮಾಯೆಯ ಆಟವನ್ನು ನೋಡುವಂತಹ – ಇಂತಹ ಸದಾ ವಿಜಯಿ, ಸದಾ ಹಾರುವಕಲೆಯುಳ್ಳವರು, ಸದಾ ಫರಿಶ್ತಾ ಸ್ವರೂಪವನ್ನು ಅನುಭವ ಮಾಡುವಂತಹ, ಶ್ರೇಷ್ಠ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 16-03-1992.

***ಹೋಲಿ ಆಚರಿಸುವುದು ಅರ್ಥಾತ್ ದೃಢಸಂಕಲ್ಪದ ಅಗ್ನಿಯಲ್ಲಿ ಬಲಹೀನತೆಗಳನ್ನು ಸುಡುವುದು ಮತ್ತು ಮಿಲನದ ಆಚರಣೆ ಆಚರಿಸುವುದು.***

*ಕಳೆದು ಹೋದದ್ದನ್ನು ಕಳೆದು ಹೋಯಿತು" ಎಂದು ಭಾವಿಸುವುದೇ ಸತ್ಯವಾದ ಹೋಲಿಯನ್ನು ಆಚರಿಸಿಕೊಳ್ಳುವುದು. ತಂದೆಯ ಸಾಂಗತ್ಯವೆಂಬ ಬಣ್ಣ, ಬ್ರಾಹ್ಮಣ ಆತ್ಮನಾದ ರೂಪ, ಸಂಪೂರ್ಣ ಪವಿತ್ರತೆಯ ಸುವಾಸನೆ ಇರಬೇಕು.* ಬ್ರಹ್ಮಚಾರಿ ಅರ್ಥಾತ್ ಮನಸ್ಸಿನಿಂದ, ತನುವಿನಿಂದ ಸಂಬಂಧ ಸಂಪರ್ಕದಲ್ಲಿ ಯಾವುದೇ ರೀತಿಯ ಆಕರ್ಷಣೆಯಲ್ಲಿ ಬರಬಾರದು. ಪ್ರಶ್ನಾರ್ಥಕವಿರುವುದರಿಂದ ಹೀಗೆ, ಹೇಗೆ ಎಂಬ ಪ್ರಶ್ನೆಗಳ ಕ್ಯೂ ಪ್ರಾರಂಭವಾಗುತ್ತದೆ. ಕೇವಲ ಬಿಂದುವನ್ನು ಇಡಬೇಕು. ಬಾಬಾ ಬಿಂದು, ನಾನು ಬಿಂದು, ವ್ಯರ್ಥಕ್ಕೆ ಕೂಡ ಬಿಂದು ಇಡಬೇಕು. ತಂದೆಯ ಸಾಂಗತ್ಯದಿಂದ ಹೋಲಿಯನ್ನು ಆಚರಿಸಿಕೊಳ್ಳಬೇಕು. ದೃಢ ಸಂಕಲ್ಪದ ಅಗ್ನಿಯ ಮೂಲಕ ಮೊದಲು ತಮ್ಮ ಬಲಹೀನತೆಗಳನ್ನು ಸುಟ್ಟಾಗ ಆಚರಣೆಯ ಆನಂದದ ಅನುಭವ ಮಾಡಲು ಸಾಧ್ಯ.

ಸ್ವಯಂ ಮತ್ತು ಸರ್ವರ ಸೇವೆಯನ್ನು ಬ್ಯಾಲೆನ್ಸ್ ಮಾಡುವುದೇ ಸೇವೆಯ ಸಫಲತೆಯಾಗಿದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪ್ರಕೃತಿಪತಿ & ಶ್ರೇಷ್ಠ ಆತ್ಮ.

2. ನಾನು ಪ್ರಕೃತಿಯ ಏರುಪೇರುಗಳನ್ನು ನೋಡಿದರೂ, ಪ್ರಕೃತಿಯ ಸುಂದರವಾದ ಆಟವನ್ನು ನೋಡಿದರೂ ಸಾಕ್ಷಿಯಾಗಿ ಆಟವನ್ನು ನೋಡುತ್ತಾ ಆಟದಲ್ಲಿ ಆನಂದವನ್ನು ಪಡೆಯುವ ಪ್ರಕೃತಿ ಪತಿಯಾಗಿದ್ದೇನೆ.

3. ನಾನು ಸಾಕ್ಷಿ ಸ್ಥಿತಿ ಎಂಬ ಆಸನದ ಮೇಲೆ ಅಚಲವಾಗಿ, ಸ್ಥಿರವಾಗಿ ಸ್ಥಿತವಾಗಿ ಪ್ರಕೃತಿಯಿಂದ ಮತ್ತು ವ್ಯಕ್ತಿಗಳಿಂದ ಯಾವ ವಿಷಯ ಬಂದರೂ ಚಲಿಸದ ಅಚಲಸ್ವರೂಪ.

4. ನಾನು • ತಂದೆಯ ಸಾಂಗತ್ಯವೆಂಬ ಬಣ್ಣ •ಬ್ರಾಹ್ಮಣಾತ್ಮ ಆಗುವುದರ ರೂಪ (ಬ್ರಾಹ್ಮಣಾತ್ಮನ ಹೊಳಪು ಮತ್ತು ಸುಂದರತೆ) •ಸಂಪೂರ್ಣ ಪವಿತ್ರತೆ ಎಂಬ ಸುವಾಸನೆ ಇರುವ ಆತ್ಮಿಕ ಗುಲಾಬಿ.

5. ನಾನು ತನುವಿನಿಂದ ಅರ್ಥಾಥ್ ದೇಹದ ಆಕರ್ಷಣೆ ಇಲ್ಲದೇ, ಮನಸ್ಸಿನಿಂದ ಅರ್ಥಾತ್ ಒಬ್ಬ ತಂದೆಯ ಹೊರತು ಯಾರ ಆಕರ್ಷಣೆಯಲ್ಲಿ ಬರದೇ, ಸಂಬಂಧದಲ್ಲಿ ಮತ್ತು ಸಂಸ್ಕಾರದಲ್ಲಿಯೂ ಕೂಡ ಬ್ರಹ್ಮಚಾರಿಯಾಗಿರುವ ಸಂಪೂರ್ಣ ಪವಿತ್ರ ಸ್ವರೂಪ.

6. ನಾನು ಸದಾ ಹಾರುವ (ಸದಾ ಉನ್ನತ ಸ್ಥಿತಿಯಲ್ಲಿರುವುದು) ಮತ್ತು ಈಜುವ (ಜ್ಞಾನವನ್ನು ಮನನ ಮಾಡುವುದೇ ಜ್ಞಾನಾಮೃತದಲ್ಲಿ ಈಜುವುದು) ಹೋಲಿ ಹಂಸ.

7. ನಾನು ತಂದೆಯೊಂದಿಗೆ ಡೈರೆಕ್ಟ್ ಸಂಬಂಧವನ್ನು ಜೋಡಿಸಿ ವರ್ತಮಾನದಲ್ಲಿ ಶಕ್ತಿ ಗುಣಗಳ ವಾರಸತ್ವ, ಮುಕ್ತಿದಾಮದಲ್ಲಿ ಸಮೀಪವಾಗಿರುವ ವಾರಸತ್ವ , ಭವಿಷ್ಯದಲ್ಲಿ 21 ಜನ್ಮಗಳ ವಾರಸತ್ವಕ್ಕೆ ಅಧಿಕಾರಿ ಆಗಿದ್ದೇನೆ.

8. ನಾನು ಸದಾ ಕಳೆದು ಹೋದದ್ದನ್ನು ಕಳೆದು ಹೋದಂತೆ ಭಾವಿಸಿ, ತಂದೆಯ ಸಾಂಗತ್ಯವೆಂಬ ರಂಗಿನಿಂದ ಹೋಲಿಯನ್ನು ಆಚರಿಸಿಕೊಂಡಿರುವ ಹೋಲಿಹಂಸ.

9. ನಾನು ಸ್ವಸ್ಥಿತಿಯಲ್ಲಿ ಇರುತ್ತಾ ಸ್ವಸೇವೆ, ಇತರ ಆತ್ಮರ ಪರಿಸ್ಥಿತಿಯನ್ನು ತೊಲಗಿಸುವ ಸೇವೆ ಎರಡನ್ನು ಜೊತೆ ಜೊತೆ ಮಾಡುವ ಕಂಬೈನ್ಡ್ ರೂಪದ ಸೇವೆಯನ್ನು ಮಾಡಿದ್ದೇನೆ.

10. ನಾನು ವಿಶ್ವದಲ್ಲಿರುವ ಆತ್ಮರೆಲ್ಲರಿಗೂ ಸಂದೇಶವನ್ನು ಕೊಟ್ಟಿದ್ದೇನೆ.

11. ನಾನು ಕಂಬೈನ್ಡ್ ಸೇವೆ ಮತ್ತು ಸದಾ ಫರಿಶ್ತಾ ಸ್ವರೂಪದ ಲಕ್ಷ್ಯವನ್ನು ಎದುರಿಗೆ ಇಟ್ಟುಕೊಂಡಿದ್ದೇನೆ.